**ದಿಃ 10.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಐಟಿ ಆಕ್ಟ್ 67(ಎ) ರಡಿಯಲ್ಲಿ ಆರೋಪ ಆದ ಕಾರಣ ಇನ್ ಕ್ಯಾಮರಾ ಪ್ರೊಸೀಡಿಂಗ್ಸ್ ಮಾಡಲು ಕೋರಿಕೊಂಡಿದ್ದು ಅನುವತಿಸಲಾಯಿತು. ಅದರಂತೆ ಉಳಿದ ವಕೀಲರು ಮತ್ತು ಕಕ್ಷಿದಾರರನ್ನು ತೆರೆದ ನ್ಯಾಯಾಲಯದಿಂದ ಹೊರಗೆ ಕಳುಹಿಸಿ ವಿಚಾರಣೆ ತೆಗೆದುಕೊಳ್ಳಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಿಡಿಯನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ನೋಡಲಾಗಿ ಅದರಲ್ಲಿರುವ ಪೋಟೋಗಳನ್ನು, ವಿಡಿಯೋ, ವಾಟ್ಸಪ್ ಮೆಸೇಜ್‌ಗಳನ್ನು ಫೇಸ್ ಬುಕ್ ನಲ್ಲಿ ಅಪ್ ಲೋಡ್ ಆದಂತಹ ಮೆಸೇಜ್ ಗಳನ್ನು ಸಾಕ್ಷಿ ನೋಡಿ ತಾನು ಆರೋಪಿತನೊಂದಿಗೆ ಇದ್ದಂತಹ ಪೋಟೋಗಳೆಂದು ನೋಡಿ ಗುರುತಿಸಿರುತ್ತಾರೆ. ಸದರಿ ಸಿಡಿಯ ಎ ಫೋಲ್ಡರ್ ನಲ್ಲಿ ಪೋಟೋಸ್ ಮತ್ತು ವಿಡಿಯೋಸ್, ಬಿ ಫೋಲ್ಡರ್ ನಲ್ಲಿ ಪೋರ್ನೋಗ್ರಾಫಿ ವಿಡಿಯೋಸ್ ಕಂಡುಬರುತ್ತದೆ. ಸದರಿ ಬಿ ಫೋಲ್ಡರ್ ನಲ್ಲಿ ನನಗೆ ಮತ್ತು ಆರೋಪಿಗೆ ಸಂಬಂಧಪಡದಂತಹ ಅಶ್ಲೀಲ ವಿಡಿಯೋಗಳು ಮತ್ತು ಫೋಟೋಗಳು ಇರುತ್ತದೆ. ಆದರೆ ಅದರಲ್ಲಿ ನನಗೆ ಮತ್ತು ಆರೋಪಿಗೆ ಸಂಬಂಧಿಸಿದ ಫೋಟೋಗಳು ಇರುತ್ತವೆ.

ಎಂಓ-1 ಮೊಬೈಲ್ ನ್ನು ಈಗಾಗಲೇ ಗುರುತಿಸಲಾಗಿದ್ದು ಅದು ಸ್ಯಾಮ್ ಸಂಗ್ ಕಂಪನಿಗೆ ಸೇರಿದ ನನ್ನ ಗಂಡನ ಮೊಬೈಲ್ ಇರುತ್ತದೆ. ಅದನ್ನು ಪೋರೆನ್ಸಿಕ್ ಲ್ಯಾಬ್‌ನಲ್ಲಿ ಬಿ ಎಂದು ಗುರುತಿಸಿರುತ್ತಾರೆ. ಬಿ ಎಂದು ಗುರುತಿಸಿರುವ ಇನ್ನೊಂದು ಮೊಬೈಲ್ ಇದ್ದು ಆರೋಪಿತನಿಗೆ ಸೇರಿದ ವಿವೋ ಕಂಪನಿಯ ಮೊಬೈಲ್ ಇರುತ್ತದೆ. ಆದರೆ ಸಾಕ್ಷಿ ಅದನ್ನು ನೋಡಿ ಗುರುತಿಸಲು ಸಾದ್ಯವಿಲ್ಲ ಎಂದಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಎಸ್ ಎಂ ವಕೀಲರಿಂದಃ

ನನಗೆ ದೂರು ನೀಡಲು ಪ್ರೇರಣೆ ಯಾರೂ ನೀಡಿಲ್ಲ, ನಾನೇ ಕೊಟ್ಟಿರುತ್ತೇನೆ. ಫ್ಯಾಮಿಲಿಯವರಿಗೆ ಫೋಟೋಸ್ ಬಂದ ವಿಚಾರ ಗೊತ್ತಾಯಿತು. ಮೊದಲು ಗಂಡನಿಗೆ ಗೊತ್ತಾಯಿತು. ಸದರಿ ಫೋಟೋಸ್ ನನ್ನ ಮೊಬೈಲಿಗೆ ಬಂದದ್ದು ಇಲ್ಲ. ನನಗೆ ಆರೋಪಿ ಪರಿಚಯ ಹೇಗಾಯಿತು ಎಂದರೆ ಶೇರ್ ಚ್ಯಾಟ್ ನ ಮೂಲಕ ಆಗಿರುತ್ತದೆ. ಆರೋಪಿ ಶೇರ್ ಚ್ಯಾಟ್ ನ ಮೂಲಕ ಪರಿಚಯ ಆದಾಗ ವಿದ್ಯಾರ್ಥಿಯಾಗಿ ಓದಿಕೊಂಡಿದ್ದು ಕೆಲಸ ಮಾಡುತ್ತಿದ್ದ. ಏನು ಓದಿಕೊಂಡಿದ್ದ ಎಂದು ಗೊತ್ತಿಲ್ಲ. ಆರೋಪಿ ನನಗೆ ಅಪರಿಚಿತ. ಆರೋಪಿ ಶೇರ್ ಚ್ಯಾಟ್ ನಲ್ಲಿ 2019 ರಲ್ಲಿ ಘಟನೆ ನಡೆಯಿತು ಎನ್ನಲಾಗಿದ್ದ ಅಂದಾಜು ಒಂದು ವರ್ಷದ ಹಿಂದೆ ಪರಿಚಿತನಾಗಿದ್ದ. ಆರೋಪಿಯೊಂದಿಗೆ ನಾನು ಸಲಿಗೆಯಿಂದ ಮಾತನಾಡುತ್ತಿದ್ದೆ. ನಾನು ಸಿಎ ಆಫೀಸಿನಲ್ಲಿ ಘಟನೆ ಆಗುವ 2-3 ವರ್ಷಗಳ ಹಿಂದಿನಿಂದ ಕೆಲಸ ಮಾಡುತ್ತಿದ್ದೆ. ಮಂಗಳೂರು ನನಗೆ ಚಿರಪರಿಚಿತ ಊರು ಎಂದರೆ ಸರಿಯಲ್ಲ. ಕೆಲವೊಂದು ಸ್ಥಳಗಳು ಗೊತ್ತು. ಈಗ ನ್ಯಾಯಾಲಯದಲ್ಲಿ ಗುರುತಿಸಿದಂತಹ ಫೋಟೋಗಳಲ್ಲಿ ನನ್ನ ಮತ್ತು ಆರೋಪಿಯ ಅಶ್ಲೀಲ ಫೋಟೋಗಳು ಕಂಡು ಬರುವುದಿಲ್ಲ ಎಂದರೆ ಸರಿ.

ಆರೋಪಿಯು ಯಾವ ಊರಿನವನು ಎಂದು ಗೊತ್ತಿಲ್ಲ. ಆರೋಪಿಯನ್ನು ಯಾವಾಗ ಮಂಗಳೂರಿಗೆ ಬರಲು ಹೇಳಿದ್ದೀರಿ ಎಂದರೆ ಇಬ್ಬರು ಮಾತನಾಡಿಕೊಂಡು ಫೆಬ್ರವರಿ 2019 ರಲ್ಲಿ ಬರಲು ತಿಳಿಸಲಾಗಿತ್ತು. ನನ್ನ ಮತ್ತು ಆರೋಪಿಯ ಮಧ್ಯ ಶೇರ್ ಚ್ಯಾಟ್ ನಲ್ಲಿ ಪರಿಚಯವಾದ 3 ತಿಂಗಳ ನಂತರ ಪ್ರೀತಿ ಮಾಡಲು ಪ್ರಾರಂಭಿಸಿದ್ದೆ. ಪ್ರೀತಿ ಮಾಡುವ ಸಮಯದಲ್ಲಿ ನಾನು ವಿವಾಹಿತೆ ಎನ್ನುವ ವಿಚಾರ ಆರೋಪಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನೆಯಾಗುವ ಸಮಯದಲ್ಲಿ ನನಗೆ ಮದುವೆಯಾಗಿ 6 ವರ್ಷಗಳಾಗಿತ್ತು.

ನನ್ನ ಮತ್ತು ಗಂಡನ ನಡುವೆ ಯಾವುದೇ ವೈಮನಸ್ಸು ಇರಲಿಲ್ಲ. ಯಾವುದೇ ವೈಮನಸ್ಸು ಇಲ್ಲದೇ ಇದ್ದರೂ ಕೂಡಾ ನಾನು ಇನ್ನೊಬ್ಬರನ್ನು ಪ್ರೀತಿಸಲು

ಕಾರಣವೇನಾದರೂ ಇದೆಯೇ ಎಂದರೆ ಯಾವುದೇ ಕಾರಣವಿರಲಿಲ್ಲ. ನಾನು ವಿವಾಹಿತೆ ಎಂದು ತಿಳಿದೂ ಆರೋಪಿತನೊಂದಿಗೆ ಪ್ರೀತಿಯಲ್ಲಿ ಬಿದ್ದುದು ತಪ್ಪು ಎಂದು ಆಗ ಗಮನದಲ್ಲಿ ಇರಲಿಲ್ಲ.

ನಾನು ಆರೋಪಿಯೊಂದಿಗೆ ಶೇರ್ ಚ್ಯಾಟ್ ನಲ್ಲಿ ಸಂಪರ್ಕದಲ್ಲಿರುವ ಸಮಯದಲ್ಲಿ ಆರೋಪಿ ನನ್ನ ಮೊಬೈಲಿಗೆ ಯಾವುದೇ ಅಶ್ಲೀಲ ಫೋಟೋ ವಿಡಿಯೋ ಸಂದೇಶಗಳನ್ನು ಕಳುಹಿಸಿದ್ದಿಲ್ಲ. ನಾನು ಆರೋಪಿಯೊಂದಿಗೆ ಹಾಗೇ ಸಂಪರ್ಕದಲ್ಲಿರುವ ಸಮಯದಲ್ಲಿ ನನ್ನ ಮತ್ತು ಆರೋಪಿತನ ನಡುವೆ ಗಲಾಟೆಯಾಗಿರಲಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಇದ್ದ ಸಂಬಂಧ ನನ್ನ ಗಂಡನಿಗೆ ಆರೋಪಿ ಫೋಟೋ ಕಳುಹಿಸಿದ್ದರಿಂದ ಗೊತ್ತಾಗಿದೆ. ನನ್ನ ಮೊಬೈಲನ್ನು ಆರೋಪಿಗೆ ಕೊಡುತ್ತಿದ್ದರಿಂದ ನನ್ನ ಗಂಡನ ನಂಬರ್ ಗೊತ್ತಾಗಿರಬಹುದು.

ಆರೋಪಿ ಫೇಸ್ ಬುಕ್ ಖಾತೆ ಹೊಂದಿದ್ದ ಎಂದು ನಿಮ್ಮ ಗಮನಕ್ಕೆ ಬಂದದ್ದು ಯಾವಾಗ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನಾನು ಫೇಸ್ ಬುಕ್ ಖಾತೆ ಹೊಂದಿಲ್ಲ. ನಾನು ಫೇಸ್ ಬುಕ್ ಖಾತೆ ಹೊಂದಿರದೇ ಇದ್ದರೂ ವಿಷ್ಣು ಜಿ ಎಂಬ ಖಾತೆಯನ್ನು ಆರೋಪಿಗೆ ಸಂಬಂಧಿಸಿದ ಖಾತೆ ಎಂದು ಗಂಡ ಹೇಳಿದ ಕಾರಣ ಗೊತ್ತಾಯಿತು. ಆರೋಪಿತನು ಇರುವ ಫೇಸ್ ಬುಕ್ ಖಾತೆ ಹೊಂದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಇರುವ ಫೇಸ್ ಬುಕ್ ಖಾತೆ ಯಾವುದು ಎಂದು ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ 2019 ರಲ್ಲಿ ಆರೋಪಿ ಮಂಗಳೂರಿಗೆ ಬಂದಾಗ ಅಶ್ಲೀಲ ಫೋಟೋಗಳನ್ನು ತೆಗೆದಿದ್ದ ಎಂದು ಹೇಳಿದ್ದು ಸದರಿ ಫೋಟೋಗಳು ಸಿಡಿಯಲ್ಲಿ ಕಾಣುತ್ತದೆ. ವಿಷ್ಣು ಜಿ ಎಂಬ ಫೇಸ್ ಬುಕ್ ಖಾತೆ ಆರೋಪಿಗೆ ಸಂಬಂಧಿಸಿದ ಖಾತೆ ಅಲ್ಲ ಎಂದರೆ ಅವರದೇ ಅನ್ನಿಸುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 29.08.2019 ರಂದು ಆರೋಪಿ ಫೋಟೋಗಳನ್ನು ಕಳುಹಿಸಿದ್ದಾನೆ ಎಂದು ಹೇಳಿದ್ದು ಒಂದೂವರೆ ತಿಂಗಳ ನಂತರ

ವಿಳಂಬವಾಗಿ ದಿನಾಂಕ 09.10.2019 ರಂದು ದೂರು ನೀಡಲು ಕಾರಣವೇನು ಎಂದರೆ ಸಾಕ್ಷಿ ಮರುದಿನವೇ ದೂರು ಕೊಟ್ಟಿದ್ದು ಅದು ಎನ್ ಸಿ ಆರ್ ಆಗಿತ್ತು.

ಮರುದಿವಸ ಕೊಟ್ಟಿದ್ದ ದೂರಿನ ಪ್ರತಿ ಮತ್ತು ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದಾ ಎಂದರೆ ಸಾಕ್ಷಿ ಅದು ಉಂಟೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ದೂರನ್ನು ನಾನೇ ಸ್ವತಃ ಬರೆದಿದ್ದೆ. ಅದರಲ್ಲಿ ಏನೆಲ್ಲಾ ವಿಚಾರ ತಿಳಿಸಿದ್ದೆ ಎಂದರೆ ನಡೆದ ಘಟನೆಯ ಸಂಬಂಧ ನಾನು ದೂರು ಕೊಟ್ಟಿರುತ್ತೇನೆ. ನಾನು ಅಂತಹ ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮತ್ತು ನನ್ನ ಗಂಡನ ನಡುವೆ ಇರುವ ವೈಯಕ್ತಿಕ ದ್ವೇಷದ ಕಾರಣದಿಂದ ನಾನು ಈ ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದಲ್ಲಿ ನಾನು ನೋಡಿದ ಫೋಟೋಗಳು ಗಂಡನ ಕುತಂತ್ರದಿಂದ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ನಾನು ಗಂಡನ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಬಳಕೆ ಮಾಡುತ್ತಿದ್ದಂತಹ ಮೊಬೈಲ್ ನಂಬರ್ 9325735987 ಮತ್ತು 9844486356. ನನ್ನ ಗಂಡನ ಮೊಬೈಲನ್ನು ಪೋಲೀಸರು ವಶಪಡಿಸಿಕೊಳ್ಳುವ ಸಮಯದಲ್ಲಿ ನಾನು ಹಾಜರಿರಲಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ 8970757525 ಮತ್ತು 8088883267 ಈ ಎರಡು ನಂಬರ್ ಗಳು ಯಾರಿಗೆ ಸಂಬಂಧ ಪಟ್ಟದ್ದು ಎಂದು ಗೊತ್ತಿಲ್ಲ. ನಾನು ಹೇಳಿದ ಈ ಎರಡು ನಂಬರಿನಿಂದ ನನಗೆ ಅಶ್ಲೀಲ ಫೋಟೋಗಳು ಬಂದಿದ್ದಿಲ್ಲ, ಸದರಿ ನಂಬರಿನಿಂದ ಸಂದೇಶಗಳು ನನ್ನ ಗಂಡನ ಮೊಬೈಲಿಗೆ ಬಂದಿತ್ತು. ನನ್ನ ಗಂಡನ ಮೊಬೈಲಿಗೆ ಬಂದಂತಹ ಸಂದೇಶಗಳು ಆರೋಪಿಯೇ ಕಳುಹಿಸಿದ್ದು ಎಂದು ಯಾವ ಆಧಾರದಲ್ಲಿ ಹೇಳುತ್ತೀರಾ ಎಂದರೆ ನನ್ನ ಮತ್ತು ಆತನ ವೈಯಕ್ತಿಕ ವಿಚಾರ ಆತನನ್ನು ಹೊರತುಪಡಿಸಿ ಬೇರೆ ಯಾರಿಗೂ ಗೊತ್ತಿರಲಿಲ್ಲ, ಆದುದರಿಂದ ಆತನೇ ಕಳುಹಿಸಿದ್ದು ಎಂದು ಹೇಳುತ್ತೇನೆ.

ನನ್ನ ಗಂಡನ ಹೆಸರು ಸೋಮಶೇಖರ್. ನನ್ನ ಗಂಡನ ಸ್ಯಾಂಸಂಗ್ ಮೊಬೈಲಿಗೆ ಬಂದಿರುವ ಮೆಸೇಜ್ ಗಳು (ಸಿಡಿಯ ಬಿ ಪೋಲ್ಡರ್) ವಿಷ್ಣು ಜಿ ಎಂಬ ಫೇಸ್ ಬುಕ್ ನ ನಕಲಿ ಖಾತೆಯಲ್ಲಿ ಸೃಷ್ಟಿಸಿದಂತಹವು ಎಂದರೆ ಸರಿಯಲ್ಲ. ನಾನು ಆರೋಪಿಯ ಜೊತೆ ಸಂಪರ್ಕದಲ್ಲಿರುವ ಸಂದರ್ಭದಲ್ಲಿ ನಾನು ನನ್ನ ಗಂಡನಿಗೆ ಡೈವೋರ್ಸ್ ಕೊಟ್ಟು ಆರೋಪಿಯನ್ನು ಮದುವೆಯಾಗುವುದಾಗಿ ಹೇಳಿದ್ದುಂಟು. ಸದರಿ ವಿಚಾರವನ್ನು ಆರೋಪಿ ನನ್ನ ಗಂಡನಿಗೆ ಸಂದೇಶದ ಮೂಲಕ ತಿಳಿಸಿದ್ದಾನೆ ಎಂದರೆ ಸರಿ. ಸದರಿ ಸಂದೇಶ ಸಿಡಿಯ ಬಿ ಪೋಲ್ಡರ್ ನ ಸ್ಯಾಂಸಂಗ್ ವಾಟ್ಸಾಪ್ ಚಾಟಲ್ಲಿ ಇದೆ ಎಂದರೆ ಸರಿ. ಆರೋಪಿ ನನ್ನ ಗಂಡನಲ್ಲಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಸಂದೇಶದ ಮುಖಾಂತರ ಹೇಳಿದ್ದಾನೆ ಎಂದರೆ ಸರಿ. ಆರೋಪಿಯನ್ನು ಬ್ಲ್ಯಾಕ್ ಮೈಲ್ ಮಾಡಿ ನನ್ನ ಗಂಡ ನ್ಯಾಯಾಲಯದಲ್ಲಿ ದಾಖಲೆಯಲ್ಲಿ ಕಂಡು ಬರುವ ಪೋಟೋಗಳನ್ನು ಆರೋಪಿಯ ಮೊಬೈಲಿನಿಂದ ನನ್ನ ಗಂಡನ ಮೊಬೈಲಿಗೆ ಬಲವಂತವಾಗಿ ಕಳುಹಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಇಬ್ಬರೂ ಸೇರಿಕೊಂಡು ಆರೋಪಿಗೆ ಬ್ಲ್ಯಾಕ್ ಮೈಲ್ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಮಾನ್ಯವಾದಂತಹ ಪೋಟೋಗಳನ್ನು ಬಳಸಿಕೊಂಡು ನಾನು ಮತ್ತು ನನ್ನ ಗಂಡ ಆರೋಪಿಯನ್ನು ಬ್ಲ್ಯಾಕ್ ಮೈಲ್ ಮಾಡಿದ್ದೇವೆ ಎಂದರೆ ಸರಿಯಲ್ಲ. ಬ್ಲ್ಯಾಕ್ ಮೈಲ್ ಮಾಡುವ ಉದ್ದೇಶದಿಂದ ಘಟನೆ ಆಯಿತು ಎಂದು ಹೇಳಲಾದ ಒಂದೂವರೆ ತಿಂಗಳ ನಂತರ ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ಸಮರ್ಪಕವಾದ ದಾಖಲೆ ಇಲ್ಲದ ಕಾರಣ ವಿಷ್ಣು ಜಿ ಎಂಬ ನಕಲಿ ಖಾತೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮೊಬೈಲನ್ನು ಪೊಲೀಸರು ವಶಪಡಿಸಿಕೊಂಡಿಲ್ಲ, ಅದನ್ನು ನಮ್ಮ ಮನೆಯವರು ಒಡೆದು ಹಾಕಿರುತ್ತಾರೆ. ನನ್ನಿಂದಲೇ ತಪ್ಪು ಆಗಿದ್ದ ಕಾರಣ ಅದಕ್ಕೆ ಸಮರ್ಪಕವಾದ ದಾಖಲೆಗಳು ಆ ಸಮಯದಲ್ಲಿ ಮೊಬೈಲಿನಲ್ಲಿ ಲಭ್ಯವಿದ್ದ ಕಾರಣ ನನ್ನ ಮೊಬೈಲನ್ನು ನಾನೇ ಬೇಕಂದತಲೇ ಒಡೆದುಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೊಬೈಲ್ ಒಡೆದುಹಾಕಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೊಬೈಲ್ ಒಡೆದುಹಾಕಲಾಗಿದೆ ಎಂದು

ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಅವರು ಕೇಳಲಿಲ್ಲ ನಾನು ಹೇಳಲಿಲ್ಲ, ಅದನ್ನು ಕೊಟ್ಟಿಲ್ಲ. ನನ್ನ ಮೊಬೈಲ್ ಒಡೆದುಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಡಿಯಲ್ಲಿರುವಂತಹ ಪೋಟೋದಲ್ಲಿ ನಾನು ಆರೋಪಿತನೊಂದಿಗೆ ಖುಷಿಯಾಗಿದ್ದುದು ಕಂಡುಬರುತ್ತದೆ ಎಂದರೆ ಸರಿ. ದೂರನ್ನು ನಾನು ಗಂಡನ ಒತ್ತಡಕ್ಕೆ ಮಣಿದು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ, ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಒಡೆದು ಹೋದ ಮೊಬೈಲ್ ಎಲ್ಲಿ ಹೋಗಿದೆ ಎಂದರೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

ನ ಉ ರೀ ಬ ನ್ಯಾ ಬೆ ಮಾಡಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಬಂಟ್ವಾಳ.